ದಿನಾಂಕಃ 02-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಉದಯರವಿ ಚೀಟ್ ಪಂಡ್ಸ ಕಂಪನಿಯಲ್ಲಿ ವ್ಯವಸ್ಥಾಪಕನಾಗಿರುತ್ತೇನೆ. ಸದರಿ ಕಂಪನಿಯಲ್ಲಿ ನಾನು ಒಬ್ಬನೇ ವ್ಯವಸ್ಥಾಪಕನಾಗಿರುತ್ತೇನೆ. ನಾನು 2 ವರ್ಷಗಳಿಂದ ಈ ಪ್ರಕರಣ ಸಂಬಂಧವಾಗಿ ವ್ಯವಸ್ಥಾಪಕನಾಗಿರುತ್ತೇನೆ. ನಾನು ವ್ಯವಸ್ಥಾಪಕನಾಗಿರುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ನಮ್ಮ ಕಂಪನಿಯಲ್ಲಿ ನಾಲ್ಕು ಜನ ಸಿಬ್ಬಂದಿಗಳು ಇರುತ್ತಾರೆ. ಅವರುಗಳೆಂದರೆ, ನಾರಾಯಣ, ಸಚೀನ್ ಕುಮಾರ್, ಶ್ರೀಮತಿ. ರಜೀನ ಟಿ ಆರ್ ಮತ್ತು ಶ್ರೀಮತಿ ಪುಷ್ಪಲತಾ ಆಗಿರುತ್ತಾರೆ. ನಮ್ಮ ಕಂಪನಿಯ ಪತ್ರ ವ್ಯವಹಾರ ಮತ್ತು ಬರವಣಿಗೆಗಳನ್ನು ಶ್ರೀಮತಿ. ರಜೀನ್ ಟಿ ಆರ್ ರವರು ಮಾಡುತ್ತಾರೆ ಎಂದರೆ ನಾನು ಸಹ ಮಾಡುತ್ತೇನೆ ಎಂದು ನುಡಿಯುತ್ತಾರೆ.

2) ನಾನು ಆರೋಪಿ ಪತ್ನಿ ಸುಮಾ ರವರಿಗೆ ಹಣ ನೀಡುವ ಸಮಯದಲ್ಲಿ ಆರೋಪಿ ಪತ್ನಿಯಿಂದ ಛಾಪಾ ಕಾಗದ ಮತ್ತು ಆರೋಪಿಯಿಂದ ಛಾಪಾ ಕಾಗದ ಪಡೆದುಕೊಂಡಿರುತ್ತೇನೆ. ಆರೋಪಿ ಪತ್ನಿ ಸಾಲ ಪಡೆಯುವ ಸಮಯದಲ್ಲಿ ಜಾಮಿನುದಾರರಾಗಿ ಆರೋಪಿ ಮತ್ತು ವೆಂಕಟರಮಣಸ್ವಾಮಿ ರವರು ಸಹಿ ಮಾಡಿರುತ್ತಾರೆ. ವೆಂಕಟರಮನಸ್ವಾಮಿ ರವರಿಗೆ ತಿಳುವಳಿಕೆ ಪತ್ರ ನೀಡಿರುವುದಿಲ್ಲ. ವೆಂಕಟರಮಣಸ್ವಾಮಿ ರವರಿಗೆ ತಿಳುವಳಿಕೆ ಪತ್ರ ನೀಡಲು ಯಾವುದೇ ತೊಂದರೆ ಇರುವುದಿಲ್ಲ. ಆರೋಪಿ ಪತ್ನಿ ಸುಮಾ ರವರಿಗೆ ತಿಳುವಳಿಕೆ ಪತ್ರ ನೀಡಿರುತ್ತೇವೆ. ಈ ಪ್ರಕರಣದ ವಿವಾದದಲ್ಲಿರುವ ಹಣಕಾಸಿನ ವ್ಯವಹಾರ ನಮ್ಮ ಕಂಪನಿ ಮತ್ತು ಆರೋಪಿ ಪತ್ನಿಯ ನಡುವೆ ಆಗಿರುತ್ತದೆ ಎಂದರೆ ಸರಿ. ಆರೋಪಿ ಪತ್ನಿ ಸಾಲ ಪಡೆಯುವ ಮುಂಚೆ ಆರೋಪಿಯು ಸಹ ನಮ್ಮ ಕಂಪನಿಯಲ್ಲಿ ಸಾಲಗಾರರಾಗಿದ್ದರು. ಆರೋಪಿ ತಾನು ಪಡೆದ ಸಾಲವನ್ನು ಮರುಪಾವತಿ ಮಾಡಿರುತ್ತಾರೆ. ಆರೋಪಿ ನೀಡಿರುವ ದಾಖಲಾತಿಗಳನ್ನು ಆರೋಪಿಗೆ ವಾಪಸ್ಸು ನೀಡಿರುವುದಿಲ್ಲ. ಆರೋಪಿ ಸಾಲ ಪಡೆಯುವ ಸಮಯದಲ್ಲ್ ಚೆಕ್ಕಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿ ಸಾಲ ಮರುಪಾವತಿ ಮಾಡಿದ ನಂತರ ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ರಜೀನ್ ರವರು ಆರೋಪಿ ನೀಡಿರುವ ಚೆಕ್ಕುಗಳನ್ನು ವಾಪಸ್ಸು ನೀಡುತ್ತೇನೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ನಾನು ಸುಳ್ಳು ಪ್ರಕರಣ ದಾಖಲು

ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನೀಡಿರುವ ಪ್ರತ್ಯುತ್ತರ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಪ್ರತ್ಯುತ್ತರವನು ನನ್ನ ಪರವಾಗಿ ಪ್ರನಿಧಿಸುತ್ತಿರುವ ವಕೀಲರ ವಿಳಾಸಕ್ಕೆ ಕಳುಹಿಸಿರುತ್ತಾರೆ ಎಂದರೆ ಸರಿ. ಆರೋಪಿಯ ಮನೆ ಬಳಿ ನಾವು ಹೋದಾಗ ಚೆಕ್ಕು ನೀಡಿರುತ್ತಾರೆ. ಆರೋಪಿ ಜಾಮೀನುದಾರರಾಗಿರುತ್ತಾರೆ ಎಂದು ದೂರಿನಲ್ಲಿ ತಿಳಿಸಿರುತ್ತೇನೆ. ಲೆಕ್ಕಪುಸ್ತಕದಲ್ಲಿ ಆರೋಪಿ ಜಾಮೀನುದಾರರಾಗಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ. ಆರೋಪಿ ಜಾಮೀನುದಾರರಾಗಿರುತ್ತಾರೆ ಎಂದು ನಮ್ಮ ಕಚೇರಿ ಪುಸ್ತಕದಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿ ಯಾವತ್ತು ಸಹ ಆರೋಪಿಯ ಪತ್ನಿಯ ಸಾಲಕ್ಕೆ ಜಾಮೀನುದಾರಾಗಿರುವುದಿಲ್ಲ ಎಂದರೆ ಸರಿಯಲ್ಲ. ಛಾಪಾ ಕಾಗದ ಮತ್ತು ಚೆಕ್ಕುಗಳನ್ನು ಆರೋಪಿ ಸಾಲ ಪಡೆದಾಗ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಬರೆದುಕೊಟ್ಟಿರುವ ಛಾಪಾ ಕಾಗದವನ್ನು ಹಾಜರುಪಡಿಸಿರುತ್ತೇನೆ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ